# ಕೃಷಿ ಕೆಲಸಕ್ಕೆ ಹಸಿರು ಇಂಧನ ಪೂರೈಸಲು ಒತ್ತು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರೈತರ ಅಪೇಕ್ಷೆಯಂತೆ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ಹೊತ್ತು 7 ತಾಸು ವಿದ್ಯುತ್ ಪೂರೈಕೆಗಾಗಿ ಹಸಿರು ಇಂಧನ ಉತ್ಪಾದನೆಗೆ ಹೆಚ್ಚು ಒತ್ತು ನೀಡಲಾಗಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಬೆಂಗಳೂರು ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಆಯೋಜಿಸಿರುವ 3 ದಿನಗಳ ಅಂತಾರಾಷ್ಟ್ರೀಯ 'ಭಾರತ ಹಸಿರು ಇಂಧನ ಮೇಳ'ಕ್ಕೆ ಸೋಮವಾರ ಚಾಲನೆ ನೀಡಿ ಮಾತನಾಡಿದರು.

ಪ್ರಧಾನಮಂತ್ರಿ ಕುಸುಮ್ ಯೋಜನೆಯಡಿ 1,181 ಮೆಗಾವಾಟ್ ಸೌರಶಕ್ತಿ ಆಧಾರಿತ ವಿದ್ಯುತ್ ಉತ್ಪಾದನೆಗೆ ಕ್ರಮವಹಿಸಲಾಗಿದೆ. ಈ ಪೈಕಿ 371 ಮೆ.ವಾ. ವಿದ್ಯುತ್ ಉತ್ಪಾದನೆಗೆ ಟೆಂಡರ್ ಅಂತಿಮಗೊಳಿಸಿದ್ದು, 379 ಮೆ.ವಾ.ಗೆ ಟೆಂಡರ್ ಕರೆಯಲಾಗುತ್ತಿದೆ. ಇದರಿಂದ ರೈತರಿಗೆ ಹಗಲು ಹೊತ್ತಿನಲ್ಲಿ ಏಳು ತಾಸು ವಿದ್ಯುತ್ ಪೂರೈಕೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ 'ಪ್ರಧಾನ ಮಂತ್ರಿ ಸೂರ್ಯಘರ್' ಯೋಜನೆಯಡಿ ಮನೆಗಳ ಸೂರಿನ ಮೇಲೆ ಸೌರಫಲಕ ಅಳವಡಿಸಿ ಇಂಧನ ಉತ್ಪಾದನೆಗೆ ಪ್ರೋತ್ಸಾಹಿಸಲಾಗುತ್ತಿದೆ. ಮನೆಗಳ ಚಾವಣಿ ಮೇಲೆ ಒಟ್ಟು 300 ಮೆ.ವಾ. ವಿದ್ಯುತ್ ಉತ್ಪಾದನೆ ಗುರಿಯಿದೆ. ಇದಕ್ಕೆ ಕೇಂದ್ರ ಸರ್ಕಾರದ ಸಹಾಯಧನ ಲಭಿಸಲಿದೆ. ಉದ್ದೇಶಿತ ಗುರಿ ತಲುಪುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಸೂರ್ಯಘರ್ ಕುರಿತು ಜನರಿಗೆ ಮಾಹಿತಿ ನೀಡಿ ಉತ್ತೇಜಿಸಲಾಗುತ್ತಿದೆ ಎಂದು ಎಂದರು. ಹೈದರಾಬಾದ್‌ನ ಮೀಡಿಯಾ ಡೇ ಮಾರ್ಕೆಟಿಂಗ್ ನಿರ್ದೇಶಕ ಮೊಹಮದ್ ಮುದಸ್ಸಿರ್ ಮಾತನಾಡಿ, ಪಳೆಯುಳಿಕೆ ಇಂಧನ ಸಂರಕ್ಷಿಸಿ ನವೀಕೃತ ಇಂಧನ ಬಳಕೆಗೆ ಒತ್ತು, ಜನ ಜಾಗೃತಿಗಾಗಿ ಮೇಳದ ಉದ್ದೇಶವಾಗಿದ್ದು, ಅನೇಕ ಸರ್ಕಾರಿ ಸಂಸ್ಥೆಗಳು ಬೆಂಬಲಿಸಿ ಒತ್ತಾಸೆ ನೀಡಿವೆ ಎಂದರು.

ಬೆಸ್ಕಾಂ, ಕ್ರೆಡಲ್ ಸೇರಿ 100ಕ್ಕೂ ಅಧಿಕ ಸರ್ಕಾರಿ ಸಂಸ್ಥೆಗಳು ಮೇಳವನ್ನು ಬೆಂಬಲಿಸಿವೆ. ನವೀಕೃತ ಇಂಧನ ಪರಿಕರಗಳು, ತಂತ್ರಜ್ಞಾನವನ್ನು ಪ್ರದರ್ಶನಕ್ಕಿಡಲಾಗಿದೆ. ನವೀಕೃತ ಇಂಧನ ವಲಯದ ಉತ್ಪಾದಕರು, ಪರಿಕರಗಳ ಉತ್ಪಾದಕರ ಸಂಘ, ತಂತ್ರಜ್ಞಾನ ಪೂರೈಕೆದಾರರು, ಸಮಾಲೋಚಕರು ಈ ಮೇಳದಲ್ಲಿ ಪಾಲ್ಗೊಂಡಿದ್ದಾರೆ.



ಇಂಡಿಯಾ ಗ್ರೀನ್ ಎನರ್ಜಿ ಮೇಳಕ್ಕೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಬಿ.ಮಹಾಂತೇಶ್ ಸೋಮವಾರ ಚಾಲನೆ ನೀಡಿ, ನವೀಕೃತ ಇಂಧನ ಉತ್ಪಾದಿಸುವ ಪರಿಕರ ವೀಕ್ಷಿಸಿದರು. ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ, ಎಂಎಸ್ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ಆಲ್ ಇಂಡಿಯಾ ಸೋಲಾರ್ ಥರ್ಮಲ್ ಫೆಡರೇಷನ್ ಅಧ್ಯಕ್ಷ ಕೆ.ಆರ್. ಸುರೇಂದ್ರ ಕುಮಾರ್ ಇತರರಿದ್ದರು.

### ಹಸಿರು ಇಂಧನ ನೀತಿ

ನವೀಕೃತ ಇಂಧನ ಉತ್ಪಾದನೆಗೆ ಸರ್ಕಾರ ಆದ್ಯತೆ ನೀಡಿ, ಉಪಕ್ರಮ ಕೈಗೊಂಡಿದೆ ಎಂದು ಕರ್ನಾಟಕ ನವೀಕರಿಸ ಬಹುದಾದ ಇಂಧನ ಅಭಿವೃದ್ಧಿ ಸಂಸ್ಥೆ (ಕ್ರೆಡಲ್) ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ತಿಳಿಸಿದರು. ಸೌರ ಫಲಕಗಳನ್ನು ಅಳವಡಿಸಿ ವಿದ್ಯುತ್ ಉತ್ಪಾದಿಸಲು ಮುಂದೆ ಬರುವವರಿಗೆ ಸಬ್ಸಿಡಿ, ಪರಿಕರ ತಯಾರಿಕೆ, ತಂತ್ರಜ್ಞಾನ ಪೂರೈಕೆದಾರರು, ಅಭಿವೃದ್ಧಿದಾರರಿಗೂ ಅಷ್ಟೇ ಮಹತ್ವ ನೀಡಿದೆ. ರಾಜ್ಯ ಸರ್ಕಾರ ಇಷ್ಟರಲ್ಲೇ ಹಸಿರು ಇಂಧನ ನೀತಿ ಜಾರಿಗೊಳಿಸ ಲಿದ್ದು, ಇದಕ್ಕಾಗಿ ನೀತಿ ಕರಡು ಕೂಡ ಸಿದ್ಧಪಡಿಸಲಾಗಿದೆ ಎಂದರು.

Vijayavani Pg.5a

# Watch out for 'unnaturally bright' watermelons, mangoes, warn experts

**RISHITA KHANNA** @ Bengaluru

WATERMELON and mangoes, the most-awaited, favoured fruits of the season, are currently found to be adulterated', health experts have cautioned. This year, owing to low yield, mangoes are being artificially ripened using calcium carbide, while watermelons are injected with erythrosin B, a red dye, to speed up the ripening process and provide the fruit with a pleasing red hue. With multiple fruit fairs currently being held in the city, experts have flagged certain clues such as uniformly coloured fruits, bright appearance, and consistent size, indicating potential chemical presence.

Edwina Raj, Head of Services - Clinical Nutrition and Dietetics, Aster CMI Hospital highlighted that unnaturally bright or uniform colours on fruit, along with coloured wax coatings, can indicate the use of calcium carbide to accelerate ripening, particularly in mangoes.



This chemical releases harmful substances such as acetylene gas and traces of arsenic compounds, suggesting artificial intervention. "Fruits with pale or translucent hues, such as strawberries, grapes, melons, and cherries, are more likely to be targets for artificial colouring," Edwina emphasised.

She explained that artificial colours typically do not alter a fruit's inherent taste, but can mask spoilage or poor quality. Therefore, people must look for overly saturated colours which may indicate artificial colouring. Unlike hybrid fruits, artificially coloured fruits are often 'unnaturally bright' and 'uniformly coloured' across their entire surface. Moreover, carbide-ripened fruits lack extra juice content and may cause a mild burning sensation in the mouth, frequent thirst, vomiting, irritability, and dizziness.

Edwina advised that before consumption, fruits must be washed thoroughly and soaked in water to remove surface waxes or potential colour residues and children, who often just pick things and directly consume, must be educated about unusually vibrant fruit colours.

Dr Nasiruddin G, Consultant - Internal Medicine, Fortis Hospital said the strongest scientific evidence regarding food dyes is their association with hyperactivity in children. Multiple studies have demonstrated that food dyes can enhance hyperactivity in children with ADHD (Attention-deficit/hyperactivity disorder – marked by an ongoing pattern of inattention and/or hyperactivity-impulsivity that interferes with functioning or development), and those without, though sensitivity levels may differ.

Indian Express
Pg.5a

Udayavani Pg.09

# 100 ತಳಿ ಮಾವು ಸಂರಕ್ಷಿಸಿದ ಕೇರಳದ ಪೊಲೀಸ್ ಶೈಜು!

## ನೂರಾರು ವರ್ಷಗಳ ಮಾವಿನ ಮರಗಳ ಬೀಜ ಸಂಗ್ರಹಿಸಿ ವಿವಿಧ ತಳಿ ಅಭಿವೃದ್ಧಿ

## ಐಐಎಚ್‌ಆರ್ ತ್ರಿಫಲ ಮೇಳದಲ್ಲಿ ಗಮನ ಸೆಳೆದ ಶೈಜು ಮಚ್ಚತಿ ಮಾವಿನ ಕಥೆ

■ ತೃಪ್ತಿ ಕುಮ್ರಗೋಡು

**ಉದಯವಾಣಿ ಸಮಾಚಾರ**

**ಬೆಂಗಳೂರು:** ಗ್ರಾಮದಲ್ಲಿನ ಅತ್ಯಂತ ಹಳೇ ಮಾವಿನ ಮರದ ಮೇಲಿನ ಪ್ರೀತಿಯಿಂದ ಬೀಜವನ್ನು ಸಂರಕ್ಷಿಸಿ, ನೈಸರ್ಗಿಕವಾಗಿ ಗಿಡ ಬೆಳೆಸುವಲ್ಲಿ ಪ್ರಾರಂಭವಾದ ಕೇರಳ ಪೊಲೀಸ್ ಇಲಾಖೆ ವಿಜಿಲೆನ್ಸ್ ವಿಭಾಗದ ಸಿಬ್ಬಂದಿ ಮಾವಿನ ತಳಿ ಸಂರಕ್ಷಣೆ ಪ್ರೀತಿಯ ಕಥೆ ಐಐಎಚ್‌ಆರ್‌ಸಿ ತ್ರಿಫಲ ಮೇಳದಲ್ಲಿ ಜನರ ಗಮನ ಸೆಳೆಯಿತು.


ಕೇರಳದ ಕಣ್ಣೂರಿನ ಶೈಜು 10 ವರ್ಷಗಳಿಂದ ಅಪರೂಪದ ಸ್ಥಳೀಯ ಮಾವಿನ ಮರಗಳ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಮನೆಯ ಸುತ್ತಮುತ್ತಲಿನ ಅಪರೂಪದ ಮಾವು ತಳಿಗಳು ಮುಂದಿನ ಜನಾಂಗಕ್ಕೆ ಲಭ್ಯವಾಗಲಿ ಎನ್ನುವ ಆಶಯ ಹೊಂದಿದ್ದಾರೆ. ಕೇರಳದ ಪೊಲೀಸ್ ಇಲಾಖೆ ವಿಜಿಲೆನ್ಸ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಶೈಜು, ಮಾವು ತಳಿಗಳ ಸಂರಕ್ಷಣೆಯಲ್ಲಿ ವಹಿಸಿದ ಆಸಕ್ತಿಯನ್ನು ಕೇಳಿ ಮೇಳದಲ್ಲಿ ಪಾಲ್ಗೊಂಡಿದ್ದ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

44ರ ಹರೆಯದ ಶೈಜು ಅವರು ಕಣ್ಣೂರಿನ ಕನ್ನಪುರದ ನಿವಾಸಿ. ಅವರು ವಾಸಿಸುವ ಪ್ರದೇಶದಲ್ಲಿ 200 ವರ್ಷಗಳಷ್ಟು ಹಳೆಯದಾದ ಮಾವಿನ ಮರವಿತ್ತು. ಆ ಮಾವಿನ ಮರದ ಹಣ್ಣಿನ ರುಚಿ ಸವಿದವರು, ಮತ್ತೊಮ್ಮೆ ಮಾವಿನ ಹಣ್ಣನ್ನು ಸೇವಿಸಬೇಕು ಎನ್ನುವ ಆಸೆ ತೋರುತ್ತಿದ್ದರು. ಈ ನಡುವೆ ಜಾಗದ ಮಾಲೀಕರು ಮರವನ್ನು ಧರೆಗುರುಳಿಸಲು ಮುಂದಾದರು. ಈ ವೇಳೆ ಮರದ ಬೀಜವನ್ನು ಸಂಗ್ರಹಿಸಿ, ನೈಸಗಿಕವಾಗಿ ಸಸಿಗಳನ್ನು ನೆಟ್ಟು ಹಳೆಯ ತಳಿಯನ್ನು ಸಂರಕ್ಷಿಸಿದ್ದರು. ಇದು ಅವರಿಗೆ ಇನ್ನಷ್ಟು ಮಾವು ತಳಿ ಸಂರಕ್ಷಣೆಗೆ ಸ್ಫೂರ್ತಿ ನೀಡಿದೆ.

**ಮಾವಿನ ಕೂಟಕ್ಕೆ ಆಮಂತ್ರಣ:** ಜತೆಗೆ ತಮ್ಮ ಮನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬೆಳೆಯುವ ಮಾವಿನ ಹಣ್ಣಿನ ಬಗ್ಗೆ ಗಮನ ಹರಿಸಿದ್ದಾರೆ. ಕೇವಲ 300 ಚ. ಮೀ.ನಲ್ಲಿ ಸುಮಾರು 100 ತಳಿಯ ಮಾವುಗಳಿದ್ದವು. ಇವುಗಳ ರುಚಿಯನ್ನು ಸ್ನೇಹಿತರಿಗೆ ಉಣಬಡಿಸಲು ಮಾವಿನ ಹಣ್ಣಿನ ಕೂಟ ಪ್ರಾರಂಭಿಸಿದೆ. ಮೊದಲ ವರ್ಷ 30 ತಳಿಗಳಿದ್ದ ಮಾವು 6 ವರ್ಷಕ್ಕೆ ಬರುವ ಸಮಯಕ್ಕೆ 100 ವಿವಿಧ ತಳಿಯ ಮಾವುಗಳು ಲಭ್ಯವಾಗಿತ್ತು. ಕೃಷಿ ವಿಜ್ಞಾನಿಗಳು ಭೇಟಿ ನೀಡಿ ಮಾವು ತಳಿಗಳನ್ನು ವೈಜ್ಞಾನಿಕ ಸಂರಕ್ಷಣೆ ಹಾಗೂ ಡಾಕ್ಯುಮೆಂಟ್ ಮಾಡಲು ಸಲಹೆ ನೀಡಿದ್ದರು ಎಂದು ಶೈಜು ಉದಯವಾಣಿಗೆ ತಿಳಿಸಿದರು.

**100 ತಳಿ ಸಂರಕ್ಷಣೆ:** 2016ರಿಂದ ಇದುವರೆಗೆ 100ಕ್ಕೂ ಅಧಿಕ ಅಪರೂಪದ ಮಾವು ತಳಿಗಳನ್ನು ಸಂರಕ್ಷಿಸಿದ್ದಾರೆ. ಇವರ ಕೆಲಸವನ್ನು ಮೆಚ್ಚಿ 2019ರಲ್ಲಿ ನ್ಯಾಷನಲ್ ಜಿನೋಮ್ ಸೇವಿಯರ್ ಪ್ರಶಸ್ತಿ ನೀಡಿದೆ. ಕೆಲವೇ ಗೆಳೆಯರ ಗುಂಪುನೊಂದಿಗೆ ಪ್ರಾರಂಭವಾದ ಮಾವಿನ ಕೂಟ ಇದೀಗ ಬೇರೆ ರಾಜ್ಯದ ಮಾವು ಪ್ರಿಯರು ಕೂಟ ಸೇರಿದ್ದಾರೆ. ಅವರಿಂದ ಸ್ಫೂರ್ತಿ ಪಡೆದು ಕರ್ನಾಟಕದಲ್ಲೂ ಮಾವು ಸಂರಕ್ಷಣೆಗೆ ಮುಂದಾಗುತ್ತಿದ್ದಾರೆ.





> ಒಂದು ಮಾವಿನ ತಳಿ ಸಂರಕ್ಷಣೆಯಿಂದ ಪ್ರಾರಂಭವಾದ ಕೆಲಸ ಇದೀಗ 100ಕ್ಕೆ ತಲುಪಿದೆ. ಬೇರೆ ಬೇರೆ ರಾಜ್ಯದ ಜನರೂ ತಮ್ಮ ಸ್ಥಳೀಯ ಮಾವು ಸಂರಕ್ಷಿಸಲು ಮುಂದಾಗುತ್ತಿದ್ದಾರೆ. ವಿವಿಧ ರಾಜ್ಯದ ಆಸ್ತಕರನ್ನು ಇದೀಗ ಮಾವಿನ ಕೂಟ ಆಹ್ವಾನಿಸಲಾಗುತ್ತಿದೆ.
>
> ● ಶೈಜು ಮಚ್ಚತಿ, ಮಾವು ತಳಿ ಸಂರಕ್ಷಕ



Economic Times Pg.04

# Govt Mulls Cold Storage Units for Onions near Big Cities

